4. ಕೆರೆ ಅಭಿವೃದ್ಧಿ ಪ್ರಾಧಿಕಾರವು 9 ಕೆರೆಗಳನ್ನು ಅಭಿವೃದ್ಧಿಪಡಿಸುತ್ತಿದೆ.

5. ಸಂಪನ್ಮೂಲಗಳನ್ನು ಆಧರಿಸಿ ಈ ಎಲ್ಲಾ ಕೆರೆಗಳನ್ನು ಹಂತಹಂತವಾಗಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಇದಕ್ಕಾಗಿ ಕೆರೆ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮವನ್ನು ಜಾರಿಗೆ ತರುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ರಾಜ್ಯದಲ್ಲಿ ವ್ಯಾಯಾಮ ಶಾಲೆ ಮತ್ತು ಗರಡಿ ಮನೆಗಳ ಮಂಜೂರಾತಿ

17(146): ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ): ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ಯುವಜನ ಸೇವಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಕಳೆದ ಎರಡು ವರ್ಷಗಳಿಂದ ಮಂಜೂರು ಮಾಡಲಾದ ವ್ಯಾಯಾಮ ಶಾಲೆ ಮತ್ತು ಗರಡಿ ಮನೆಗಳ ಸಂಖ್ಯೆ ಎಷ್ಟು? (ಕ್ಷೇತ್ರವಾರು ವಿವರಗಳನ್ನು ನೀಡುವುದು);

ಆ) ಹಾಗಿದ್ದಲ್ಲಿ, ಮಂಜೂರು ಮಾಡಿದ ವ್ಯಾಯಾಮ ಶಾಲೆ ಮತ್ತು ಗರಡಿ ಮನೆಗಳಿಗೆ ನೀಡಿದ ಅನುದಾನದ ಮೊತ್ತವೆಷ್ಟು? (ತಾಲ್ಲೂಕುವಾರು ವಿವರಗಳನ್ನು ನೀಡುವುದು);

ಇ) ಮಂಜೂರು ಮಾಡಿದ ವ್ಯಾಯಾಮ ಶಾಲೆ ಮತ್ತು ಗರಡಿ ಮನೆಗಳಿಗೆ ಮಾಡಿದ ಪರಿಕರಗಳ ಸಂಖ್ಯೆ ಎಷ್ಟು? (ಪೂರ್ಣ ಮಾಹಿತಿ ನೀಡುವುದು);

ಶ್ರೀ ಜೆ. ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ಯುವಜನ ಸೇವಾ ಸಚಿವರು):

ಅ) 21 ಗರಡಿ ಮನೆ/ವ್ಯಾಯಾಮಶಾಲೆಗಳು (ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ).

ಆ) ರೂ. 160.0 ಲಕ್ಷಗಳು (ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ).

ಇ) ಗರಡಿ ಮನೆಗಳಿಗೆ ಪರಿಕರಗಳನ್ನಾಗಲಿ ಅಥವಾ ಪರಿಕರಗಳು ಪಡೆಯುವುದಕ್ಕಾಗಿ ಯಾವುದೇ ಅನುದಾನವನ್ನು ಮಂಜೂರು ಮಾಡಿರುವುದಿಲ್ಲ.

ಅನುಬಂಧ

ಅ. ಬಾಗಲಕೋಟೆ ಜಿಲ್ಲೆ

ಕ್ರಸಂ.	ಗರಡಿ ಮನೆಗಳ ಹೆಸರು	ಅನುದಾನದ ಮೊತ್ತ (ರೂ. ಲಕ್ಷಗಳಲ್ಲಿ)
1.	ಜೈ ಹನುಮಾನ್ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘ (ರಿ) ಅಗಲೂರು ತಾಲ್ಲೂಕು ಜಮಖಂಡಿ	2,50,000
2.	ಜೈ ಹನುಮಾನ್ ವ್ಯಾಯಾಮ ಶಾಲೆ ಚಿಮ್ಮಡಗಿ ತಾಲ್ಲೂಕು ಜಮಖಂಡಿ	5,00,000
3.	ಶ್ರೀ ಕಾಡು ಸಿದ್ದೇಶ್ವರ ಜಂಗಿ ನಿಖಾಲಿ ಕುಸ್ತಿ ಕಮಿಟಿ ಬನಹಟ್ಟಿ ತಾಲ್ಲೂಕು ಜಮಖಂಡಿ	5,00,000
4.	ಬಾಗಲಕೋಟೆ ಜಿಲ್ಲಾ ಕುಸ್ತಿ ಸಂಘ (ರಿ) ಶಿರೋಳ್ ತಾಲ್ಲೂಕು ಮುಧೋಳ	5,00,000
5.	ಅಗಲೂರು ಗ್ರಾಮೀಣ ಗರಡಿ ಮನೆ, ಅಗಲೂರು ತಾಲ್ಲೂಕು ಜಮಖಂಡಿ	2,50,000
6.	ಶ್ರೀ ಸದ್ಗುರು ಶಿವಾನಂದ ಶರಣಬಸಪ್ಪ ಕಮರೀಮಠ, ಚಿಕ್ಕಪಡಸಲಗಿ, ಜಮಖಂಡಿ	5,00,000
	ಒಟ್ಟು	**25,00,000**

ಆ) ಬಿಜಾಪುರ ಜಿಲ್ಲೆ

1.	ಅಹಿರಸಂಗ ಗ್ರಾಮ, ಇಂಡಿ ತಾಲ್ಲೂಕು ಬಿಜಾಪುರ	5,00,000
2.	ಲಚಾಣ್ಯ ಗ್ರಾಮ, ಇಂಡಿ ತಾಲ್ಲೂಕು ಬಿಜಾಪುರ	5,00,000
3.	ಸಾಲೋಟಗಿ ಇಂಡಿ ತಾಲ್ಲೂಕು ಬಿಜಾಪುರ	5,00,000
	ಒಟ್ಟು	**15,00,000**

ಇ) ಬೆಳಗಾವಿ ಜಿಲ್ಲೆ

1.	ಮಹಾವೀರ ವ್ಯಾಯಾಮ ಶಾಲೆ, ಬಹದ್ದೂರು ಗಲ್ಲಿ ಬೆಳಗಾವಿ	18,00,000
2.	ಉಗರಗೋಳ ಗ್ರಾಮ ಸವದತ್ತಿ ತಾಲ್ಲೂಕು ಬೆಳಗಾವಿ	5,00,000
3.	ಘೋಡಗೇರಿ ಗ್ರಾಮ ವ್ಯಾಯಾಮ ಶಾಲೆ, ಹುಕ್ಕೇರಿ ತಾಲ್ಲೂಕು, ಬೆಳಗಾವಿ	10,00,000
4.	ಸತ್ತಿ ಗ್ರಾಮ ಗರಡಿ ಮನೆ ನಿರ್ಮಾಣ ಅಥಣಿ ತಾಲ್ಲೂಕು ಬೆಳಗಾವಿ	7,00,000
5.	ಬೆಡಸೂರು ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ ಅಥಣಿ ತಾಲ್ಲೂಕು ಬೆಳಗಾವಿ	5,00,000

6.	ಕಕಮರಿ ಗ್ರಾಮದಲ್ಲಿ ವ್ಯಾಯಾಮಶಾಲೆ ನಿರ್ಮಾಣ ಅಥಣಿ ತಾಲ್ಲುಕು ಬೆಳಗಾವಿ	10,00,000
	ಒಟ್ಟು	**55,00,000**

ಈ) ಚಿತ್ರದುರ್ಗ ಜಿಲ್ಲೆ

1.	ಚಿತ್ರದುರ್ಗ ನಗರದ ದೊಡ್ಡ ಪೇಟೆ ವ್ಯಾಯಾಮ ಶಾಲೆ ಚಿತ್ರದುರ್ಗ	7,50,000
2.	ಚಿತ್ರದುರ್ಗ ನಗರದ ಕರುವಿನ ಕಟ್ಟೆ ವೃತ್ತದ ಸಣ್ಣ ಗರಡಿ ಮನೆ ಚಿತ್ರದುರ್ಗ	7,50,000
3.	ಚಿತ್ರದುರ್ಗ ನಗರದ ಬುರುಜನ ಹಟ್ಟಿ ಹತ್ತಿರ ಚಿತ್ರದುರ್ಗ	30,00,000
4.	ಹೊಸದುರ್ಗ ತಾಲ್ಲೂಕು ತಣಿಗೆಕಲ್ಲು ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ	5,00,000
5.	ಸಾಣೆಹಳ್ಳಿ ಗ್ರಾಮದಲ್ಲಿ ಗರಡಿ ಮನೆ ನಿರ್ಮಾಣ ಕಾಮಗಾರಿ ಚಿತ್ರದುರ್ಗ ಜಿಲ್ಲೆ	5,00,000
6.	ಹೊಸದುರ್ಗ ಪಟ್ಟಣದಲ್ಲಿ ಗರಡಿ ಮನೆ ನಿರ್ಮಾಣ ಕಾಮಗಾರಿ ಚಿತ್ರದುರ್ಗ ಜಿಲ್ಲೆ	10,00,000
	ಒಟ್ಟು	**65,00,000**
	ಒಟ್ಟು ಮೊತ್ತ	**1,60,00,000**

ಬಸವ ಕಲ್ಯಾಣ ಕ್ಷೇತ್ರದಲ್ಲಿ ವಿವಿಧ ವಸತಿ ಯೋಜನೆಯಡಿ ನಿರ್ಮಿಸಲಾಗಿರುವ ಮನೆಗಳು

18(156): ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಸವ ಕಲ್ಯಾಣ ಮತಕ್ಷೇತ್ರದಲ್ಲಿ ಕಳೆದ ಎರಡು ವರ್ಷಗಳ ಅವಧಿಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಗಳಡಿಯಲ್ಲಿ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ?

ಆ) ಇದಕ್ಕಾಗಿ ವೆಚ್ಚ ಮಾಡಲಾದ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಹಣದ ಮೊತ್ತ ಎಷ್ಟು?

ಇ) ಈ ಅವಧಿಯಲ್ಲಿ ಪ್ರತಿ ವರ್ಷ ಎಷ್ಟು ಮನೆಗಳನ್ನು ನಿರ್ಮಿಸುವ ಗುರಿಯನ್ನು ಹೊಂದಲಾಗಿತ್ತು; ಈ ಗುರಿಯನ್ನು ಸಾಧಿಸಲಾಗಿದೆಯೇ?

ಈ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?